# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ

**ಸಿಸಿ ಸಂಖ್ಯೆ: 773/2013**

ಹೆಸರು : ವೀರೆಂದ್ರ ಜೈನ್

ತಂದೆಯ ಹೆಸರು : ನೇಮಿರಜ್ ಜೈನ್

ಪ್ರಾಯ : 59 ವರ್ಷ

ಉದ್ಯೋಗ : ಅಡಿಗೆ ಕೆಲಸ

ವಾಸ : ಉಜಿರೆ ಗ್ರಾಮ, ಬೆಳ್ತಂಗಡಿ ತಾಲೂಕು

ದಿನಾಂಕ **08.4.2024** ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ

ದಿನಾಂಕ 06.11.2010 ರಂದು ನಾನು ಮತ್ತು ನನ್ನ ಹೆಂಡತಿ ಕೆಲಸದ ನಿಮಿತ್ತ ಹೋಗಿದ್ದು, ಬೆಳಿ್ಗ 6 ಗಂಟೆಯಿಂದ ಮದ್ಯಾಹ್ನ 12.30 ಗಂಟೆಯ ಸಮಯದಲ್ಲಿ ನಮ್ಮ ಮನೆಯಲ್ಲಿ ಕಳ್ಳತನವಾಗಿರುತ್ತದೆ . ನನ್ನ ಹೆಂಡತಿ ಸದರಿ ದಿನಾಂಕ ಮದ್ಯಾಹ್ನ 12.30 ಗಂಟೆಗೆ ಮನೆಗೆ ಮರಳಿದಾಗ ಮ್ಮ ಮನೆಯ ಮುಂಬಾಗಿಲ ಬೀಗವನ್ನು ಮುರಿದು ಯಾರೋ ಕಳ್ಳರು ಒಳಗೆ ಪ್ರವೇಶಿಸಿ ಮನೆಯೆಳಗಿನಿಂದ ಬಾಗಿಲನ್ನು ಲಾಕ್ ಮಾಡಿದ್ದರು. ಹಿಂಬದಿ ಬಾಗಿಲು ತೆರೆದಿತ್ತು, ಪರಿಶೀಲಿಸಲಾಗಿ ನಮ್ಮ ಮನೆಯ ಕೋಣೆಯಲ್ಲಿ ಇಟ್ಟಿದ್ದ ಎರಡು ಟ್ರಂಕ್ ಒಂದು ಸೂಟುಕೇಶ್ ನಲ್ಲಿದ್ದ ಚಿನ್ನದ ಮತ್ತು ಬೆಳ್ಳಿಯ ಅಭರಣಗಳು ನಗದು ರೂ. 6000/- ಒಂದು ಸಿರೆ, ಮತ್ತು ಒಂದು ಸೆರ್ಟ್ ಪಿಶ್ ಕಳ್ಳತನವಾಗಿತ್ತು. ನನ್ನ ಹೆಂಡತಿ ಸದರಿ ವಿಶೇಯವನ್ನು ನನಗೆ ಪೋನ್ ಮೂಲಕ ತಿಳಿಸಿರುತ್ತಾರೆ. ಆ ಸಮಯದಲ್ಲಿ ನಮ್ಮ ಮನೆಯಲ್ಲಿ ಕಳ್ಳತನವಾಗಿದ್ದ ವಸ್ತುಗಳ ಬೆಲೆ ಅದಿನ ಮಾರುಕಟ್ಟೆ ಧಾರಣೆ ಪ್ರಕಾರ ರೂ. 25 ಸಾವಿರ ಇತ್ತು . ನಾನು ಮನೆಗೆ ಬಂದು ಕಳ್ಳತನವಾದ ಮನೆ ನೋಡಿ ನಂತರ ಅದೇ ದಿನ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿರುತ್ತೇನೆ . ನಾನು ನೀಡಿರುವ ದೂರನ್ನು ಈಗ ನೋಡಿದ್ದು, ಅದನ್ನು ನಿಪಿ-1 ಎಂದು ಸಾಕ್ಷಿ ಸಹಿಯನ್ನು ನಿಪಿ-1 (ಎ) ಎಂದು ಈಗಾಗಲೇ ಗುರುತಿಸಲಾಗಿದೆ. ನಂತರ

ಅದೇ ದಿನ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ನಾನು ತೋರಿಸಿದ ಸ್ಥಳದಲ್ಲಿ ತಕ್ಷೀರು ಸ್ಥಳದ ಪಂಚನಾಮೆಯನ್ನು ಮಾಡಿರುತ್ತಾರೆ. ಆ ಸಮಯದಲ್ಲಿ ಜಯರಾಮ್ ಮತ್ತು ಜನಾರ್ಧನ ಎಂಬುವವರು ಸಹ ಇದ್ದರು. ಸದರಿ ಪಂಚನಾಮಯ ಸಮಯದಲ್ಲಿ ಎರಡು ಕಬ್ಬಿಣದ ರಾಡುಗಳನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಪಂಚನಾಮೆ ಯನ್ನು ಸಾಕ್ಷಿ ನೋಡಿಗುರುತಿಸಿದ್ದು ಅದನ್ನು ನಿಪಿ-2 ಎಂದು ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಈಗಾಗಲೇ ಗುರುತಿಸಲಾಗಿದೆ . ದಿನಾಂಕಃ 03.07.2012 ರಂದು ಬೆಳ್ತಂಗಡಿ ಪೊಲೀಸ್ ಠಾಣೆಯಿಂದ ನನಗೆ ಫೋನ್ ಮಾಡಿ ಇಂದ್ರಜೀತ್, ಗೋಪಿ ಮತ್ತು ಅಶೋಕ್ ಎಂಬುವವರು ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ್ದರು ಎಂದು ಬಂಟ್ವಾಳ ಪೊಲೀಸ್ ಠಾಣೆಗೆ ಹೋದಾಗ ತಿಳಿಸಿರುತ್ತಾರೆ . ಬಂಟ್ವಾಳ ಪೊಲೀಸ್ ಠಾಣೆಗೆ ಹೋದಾಗ ನಮ್ಮ ಮನೆಯಲ್ಲಿ ಕಳ್ಳತನವಾಗಿದ್ದ ಬಂಗಾರದ ಮತ್ತು ಬೆಳ್ಳಿಯ ಅಭರಣಗಳನ್ನು ಪೊಲೀಸರು ತೋರಿಸಿರುತ್ತಾರೆ. ಸದರಿ ಪೊಲೀಸ್ ಠಾಣೆಯಲ್ಲಿ 8 ಗ್ರಾಂ ನ ಒಂದು ಬಂಗಾರದ ಚೈನ್, 4 ಗ್ರಾಂ ನ ಒಂದು ಬಂಗಾರದ ಜೈನು. ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಅವುಗಳನ್ನು ಈಗಾಗಲೇ ಮುದ್ದೆ ಮಾಲು -1 ಮತ್ತು 2 ಎಂದು ಗುರುತಿಸಲಾಗಿದೆ. ಸರಿದ ಪೊಲೀಸ್ ಠಾಣೆಯಲ್ಲಿ 4 ಗ್ರಾಂ ತೂಕದ ಒಂದು ಜೊತೆ ಬೆಂಡೋಲೆಯನ್ನು ಹಾಜರುಪಡಿಸಿದ್ದು ಮು. ಮಾ 3 ಎಂದು ಗುರುತಿಸಲಾಗಿದೆ. 4 ಗ್ರಾಂ ತೂಕದ ಒಂದು ಚಿನ್ನದ ಕಿವಿಯ ಒಂದು ಜೊತೆ ರಿಂಗನ್ನು ಹಾಜರುಪಡಿಸಿದ್ದು ಅದನ್ನು ಈಗಾಗಲೇ ಮು. ಮಾಲ 4 ಎಂದು , 30 ಗ್ರಾಂ ತೂಕದ ಒಂದು ಜೊತೆ ಕಾಲು ಚೈನನ್ನು ಹಾಜರುಪಡಿಸಿದ್ದು ಅದನ್ನು ಮು. ಮಾ 5 ಎಂದು ಗುರುತಿಸಿದ್ದು, ಡ 35 ಗ್ರಾಂ ತೂಕದ ಬೆಳ್ಳಿಯ ಸೊಂಟದ ಚೈನನ್ನು ಹಾಜರುಪಡಿಸಿದ್ದು ಅದನ್ನು ಮು. ಮಾ- 6 ಎಂದು, 10 ಗ್ರಾಂ ತೂಕದ ಒಂದು ಜೊತೆ ಬೆಳ್ಳಿಯ ಕಾಲುಂಗರವನ್ನು ಹಾಜರುಪಡಿಸಿದ್ದು ಅದನ್ನು ಮು. ಮಾ. 7 ಎಂದು, 10 ಗ್ರಾಂ ತೂಕದ ಎರಡು ಬೆಳ್ಳಿಯ ಸರಗಳನ್ನು ಹಾಜರುಪಡಿಸಿದ್ದು, ಗುಂಡುಗಳು ಇರುವ ಎರಡು ಬೆಳ್ಳಿಯ ಚೈನನ್ನು ಮು. ಮಾ .8. ಎಂದು ಮತ್ತೊಂದು ಬೆಳ್ಳಿಯ ಚೈನನ್ನು ಮು. ಮಾ. 9 ಎಂದು ಈಗಾಗಲೇ ದಿನಾಂಕ 30.10.2014 ರಂದು ಗುರುತಿಸಲಾಗಿದೆ. ಸದರಿ ಪೊಲೀಸ್ ಠಾಣೆಯಲ್ಲಿ ಮೂರು ಜನ ವ್ಯಕ್ತಿಗಳನ್ನು ತೋರಿಸಿ ಸದರಿ ವ್ಯಕ್ತಿಗಳು ನಮ್ಮ ಒಡವೆಗಳಾದ ಮು. ಮಾ 1 ರಿಂದ 9 ನ್ನು ಕಳ್ಳತನ ಮಾಡಿರುವುದಾಗಿ ತಿಳಿಸಿರುತ್ತಾರೆ . ನಾನು ಪೊಲೀಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆ . ಮಹಜರಿ ಮಾಡುವಾಗ ಪೊಲೀಸರು 2 ಕಬ್ಬಿಣದ ರಾಡುಗಳನ್ನು ಅಮಾನತು ಪಡಿಸಿಕೊಂಡಿದ್ದು ಅವುಗಳನ್ನು ಈಗಾಗಲೆ ಮು. ಮಾಲು 10 ಮತ್ತು 11 ಎಂದು ಈಗಾಗಲೇ ಗುರುತಿಸಲಾಗಿದೆ.

CC 774/2013
Pw-1

ಈ ಪ್ರಸ್ತುತ ಪ್ರಕರಣದಲ್ಲಿ ಆರೋಪಿಯು ತಲೆಮರೆಸಿಕೊಂಡಿರುವುದರಿಂದ ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಈ ಮೇಲಿನಂತೆ ಸಾಕ್ಷ್ಯ ದಾಖಲು ಮಾಡಿಕೊಳ್ಳಲಾಯಿತು.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಬೆಳ್ತಂಗಡಿ

**(ಸಾ.ಓ.ಹೇ.ಕೇ.ಸ.ಇ.ಎ.ಒ)**